# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2382

ಸದಸ್ಯರ ಹೆಸರು : ಶ್ರೀ ಮಧು ಜಿ.ಮಾದೇಗೌಡ

ಉತ್ತರಿಸುವ ದಿನಾಂಕ : 27-03-2026.

ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸಾರ್ವಜನಿಕ ಸ್ಥಳಗಳಲ್ಲಿ ಭಿಕ್ಷಾಟನೆಯನ್ನು ಸಂಪೂರ್ಣವಾಗಿ ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; | ಸಾರ್ವಜನಿಕ ಸ್ಥಳಗಳಲ್ಲಿ ಭಿಕ್ಷಾಟನೆಯನ್ನು ತಡೆಗಟ್ಟಲು ಸರ್ಕಾರವು 1975 ರಲ್ಲಿ ರಾಜ್ಯಾದ್ಯಂತ ಭಿಕ್ಷಾಟನೆಯನ್ನು ನಿಷೇಧಿಸಿರುವುದರಿಂದ ಸಾರ್ವಜನಿಕರಿಗೆ ಭಿಕ್ಷುಕರುಗಳಿಗೆ ಭಿಕ್ಷೆಯನ್ನು ನೀಡುವ ಮೂಲಕ ಭಿಕ್ಷಾಟನೆಗೆ ಪ್ರೋತ್ಸಾಹ ನೀಡದಂತೆ ಬಸ್‌ಗಳಲ್ಲಿ / ಡಿಜಿಟಲ್ ವಾಲ್‌ಪೇಂಟಿಂಗ್, LED vehicle ನಲ್ಲಿ ಆಟೋಟಾಪ್ / ವಿವಿಧ ಮಾಸಪತ್ರಿಕೆ, ದಿನಪತ್ರಿಕೆ ಇತ್ಯಾದಿಗಳಲ್ಲಿ ಜಾಹಿರಾತು ನೀಡುವ ಮೂಲಕ ಅರಿವು ಮೂಡಿಸಲು ಕ್ರಮ ವಹಿಸಲಾಗುತ್ತಿದೆ.<br><br>ಸಾರ್ವಜನಿಕ ಸ್ಥಳಗಳಲ್ಲಿ ಭಿಕ್ಷುಕರು ಕಂಡು ಬಂದಲ್ಲಿ, ದೂರು ನೀಡಲು ಸಮಾಜ ಕಲ್ಯಾಣ ಇಲಾಖೆಯಡಿ ಸ್ಥಾಪಿಸಲಾಗಿರುವ ಸಹಾಯವಾಣಿ ಸಂಖ್ಯೆ:9482300400 ಗೆ ಕರೆ ಮಾಡಿದ್ದಲ್ಲಿ ಭಿಕ್ಷುಕರನ್ನು ಬಂಧಿಸಿ/ರಕ್ಷಣೆ ಮಾಡಿ ನಿಯಮಾನುಸಾರ ಆಶ್ರಯ ಕಲ್ಪಿಸಲಾಗುವುದು ಹಾಗೂ ಪ್ರತಿನಿತ್ಯ ನಿರಾಶ್ರಿತರ ಪರಿಹಾರ ಕೇಂದ್ರಗಳ ವಾಹನಗಳು ಗಸ್ತು ಮಾಡಿ ಭಿಕ್ಷುಕರನ್ನು ಬಂಧಿಸಲು ಕ್ರಮವಹಿಸಲಾಗುತ್ತಿದೆ. |
| ಆ) | ರಾಜ್ಯದ ಭಿಕ್ಷುಕರಿಗಾಗಿ ತೆರೆದಿರುವ ನಿರಾಶ್ರಿತರ ಪರಿಹಾರ ಕೇಂದ್ರಗಳ ಸಂಖ್ಯೆ ಎಷ್ಟು; ಈ ಕೇಂದ್ರಗಳಲ್ಲಿರುವ ಭಿಕ್ಷುಕರ ಸಂಖ್ಯೆ ಎಷ್ಟು; (ಕೇಂದ್ರವಾರು ಭಿಕ್ಷುಕರ ಸಂಖ್ಯೆಯ ವಿವರ ನೀಡುವುದು) | ರಾಜ್ಯದಲ್ಲಿ ಒಟ್ಟು 15 ನಿರಾಶ್ರಿತರ ಪರಿಹಾರ ಕೇಂದ್ರಗಳಾದ ಬೆಂಗಳೂರು, ಬೆಂಗಳೂರು ಪೂರ್ವ, ಬಳ್ಳಾರಿ, ಬೆಳಗಾವಿ, ಚಿತ್ರದುರ್ಗ, ಧಾರವಾಡ, ದಾವಣಗೆರೆ, ದಕ್ಷಿಣ ಕನ್ನಡ, ಕಲ್ಬುರ್ಗಿ, ಕೋಲಾರ, ಮೈಸೂರು, ರಾಯಚೂರು, ಶಿವಮೊಗ್ಗ, ತುಮಕೂರು ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಕೇಂದ್ರಗಳಲ್ಲಿ 2025-26 ನೇ ಸಾಲಿನ ಫೆಬ್ರುವರಿ-2026ರ ಅಂತ್ಯದ ವರೆಗಿನ ಭಿಕ್ಷುಕರುಗಳು ಆಶ್ರಯ ಪಡೆದವರ ಅಂಕಿ-ಅಂಶಗಳನ್ನು ಅನುಬಂಧ -1 ರಲ್ಲಿ ನೀಡಲಾಗಿದೆ. |
| ಇ) | ಉಳಿದ ಜಿಲ್ಲೆಗಳಲ್ಲೂ ನಿರಾಶ್ರಿತರ ಕೇಂದ್ರಗಳನ್ನು ಆರಂಭಿಸದೇ ಇರುವುದಕ್ಕೆ ಕಾರಣಗಳೇನು; (ವಿವರವಾದ ಮಾಹಿತಿ ನೀಡುವುದು) | ಚಾಮರಾಜನಗರ, ಹಾವೇರಿ, ಹಾಸನ, ಯಾದಗಿರಿ, ಕೊಪ್ಪಳ, ಬೀದರ್, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ಜಿಲ್ಲೆಗಳಲ್ಲಿ ಜಮೀನು ಮಂಜೂರಾಗಿದ್ದು, ಮೂಲಭೂತ ಸೌಕರ್ಯಗಳಡಿ ವಿವಿಧ ಕಾಮಗಾರಿಗಳು ಚಾಲನೆಯಲ್ಲಿದ್ದು, ಪ್ರಕ್ರಿಯೆ ಪೂರ್ಣಗೊಂಡ ನಂತರ ಕೇಂದ್ರ ಪ್ರಾರಂಭಿಸಲು ಕ್ರಮವಹಿಸಲಾಗುವುದು.<br><br>ಬೀದರ್ ಜಿಲ್ಲೆಯಲ್ಲಿನ ಜಮೀನಿನ ಗಡಿ ಗುರುತಿಸಬೇಕಾಗಿರುತ್ತದೆ. ಬಾಗಲಕೋಟೆ ಜಿಲ್ಲೆಯಲ್ಲಿ ಮಂಜೂರಾಗಿದ್ದ ಜಮೀನಿನ ಬಗ್ಗೆ ತಕರಾರು ಇರುವುದರಿಂದ ಬೇರೆ ಸ್ಥಳದಲ್ಲಿ ಜಾಗವನ್ನು ಗುರುತಿಸಲಾಗಿದ್ದು, ಮಂಜೂರಾತಿ ಪ್ರಕ್ರಿಯೆ ಬಾಕಿ ಇರುತ್ತದೆ ಹಾಗೂ ಉಳಿದ ಜಿಲ್ಲೆಗಳಲ್ಲಿ ಜಮೀನು ಮಂಜೂರಾತಿ ಪ್ರಕ್ರಿಯೆ ಬಾಕಿ ಇರುತ್ತದೆ. |
| ಈ) | ನಿರಾಶ್ರಿತರ ಪರಿಹಾರ ಕೇಂದ್ರಗಳ ರಕ್ಷಣೆಯಲ್ಲಿರುವ ಭಿಕ್ಷುಕರಿಗೆ ಒದಗಿಸಲಾಗುತ್ತಿರುವ ಸೌಲಭ್ಯಗಳೇನು; | ನಿರಾಶ್ರಿತರ ಪರಿಹಾರ ಕೇಂದ್ರಗಳ ರಕ್ಷಣೆಯಲ್ಲಿರುವ ಭಿಕ್ಷುಕರಿಗೆ/ ನಿರಾಶ್ರಿತರಿಗೆ ಕರ್ನಾಟಕ ಭಿಕ್ಷಾಟನಾ ನಿಷೇಧ ಅಧಿನಿಯಮ ಮತ್ತು ನಿಯಮಗಳು 1975 ರನ್ವಯ ಉಪಹಾರ, ಊಟ, ವೈದ್ಯಕೀಯ ಸೌಲಭ್ಯ, ಸಮವಸ್ತ್ರ, ಹಾಸಿಗೆ ಹೊದಿಕೆ, ಅಕ್ಷರ ಕಲಿಕೆ, ಗ್ರಂಥಾಲಯ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಡಿ ಮನರಂಜನೆ, ಯೋಗ-ಧ್ಯಾನ ಇತ್ಯಾದಿಗಳನ್ನು ಒದಗಿಸಲಾಗುತ್ತಿದೆ.<br>ಕೇಂದ್ರದಿಂದ ಭಿಕ್ಷುಕರು/ನಿರಾಶ್ರಿತರುಗಳು ಬಿಡುಗಡೆಯಾದ ನಂತರ ಮತ್ತೆ ಭಿಕ್ಷಾಟನಾ ವೃತ್ತಿಗೆ ಮರಳಬಾರದೆಂಬ ಉದ್ದೇಶದಿಂದ ಈ ಕೆಳಕಂಡಂತೆ ವಿವಿಧ ವೃತ್ತಿಪರ ತರಬೇತಿಗಳನ್ನು ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಫೆಬ್ರುವರಿ -26 ರ ಅಂತ್ಯಕ್ಕೆ ಒಟ್ಟು 936 ನಿರಾಶ್ರಿತರುಗಳಿಗೆ ತರಬೇತಿ ನೀಡಲಾಗಿದೆ. ವಿವರಗಳನ್ನು ಅನುಬಂಧ -2 ರಲ್ಲಿ ನೀಡಲಾಗಿದೆ. |

1.ಹೊಲಿಗೆ ತರಬೇತಿ
2. ಕೃಷಿ ಮತ್ತು ತೋಟಗಾರಿಕೆ ತರಬೇತಿ,
3. ಪಶುಸಂಗೋಪನೆ,
4. ಕುರಿ ಸಾಕಾಣಿಕೆ,
5.ಹ್ಯಾಂಡ್ ಲೂಮ್ ಮತ್ತು ಪವರ್ ಲೂಮ್,
6. ಸಿದ್ಧ ಉಡುಪು ತಯಾರಿಕಾ ಘಟಕ,
7. ತೆಂಗಿನ ನಾರಿನ ಮ್ಯಾಟ್ ತಯಾರಿಕೆ,
8. ಗೃಹೋಪಯೋಗಿ ವಸ್ತುಗಳಾದ ಫಿನಾಯಿಲ್, ಸೋಪ್ ಪೌಡರ್, ಬ್ಲೀಚಿಂಗ್ ಪೌಡರ್ ಇತ್ಯಾದಿ ವಸ್ತುಗಳ ತಯಾರಿಕೆ
9. ಸ್ವಚ್ಛತಾ ತರಬೇತಿ ಇತ್ಯಾದಿಗಳು.

ತರಬೇತಿ ಅವಧಿಯಲ್ಲಿ ನಿರಾಶ್ರಿತರುಗಳಿಗೆ ದಿನವೊಂದಕ್ಕೆ 8 ಗಂಟೆಗಳ ತರಬೇತಿ ಅವಧಿಗೆ ರೂ.75/-ಗಳಂತೆ ಹಾಗೂ 8 ಗಂಟೆಗಳ ಅವಧಿಗಿಂತ ಕಡಿಮೆ ಅವಧಿ ತರಬೇತಿಗೆ ರೂ.38/-ಗಳಂತೆ ತರಬೇತಿ ಭತ್ಯೆಯನ್ನು ನಿರಾಶ್ರಿತರುಗಳ ಹೆಸರಿನಲ್ಲಿ ಪೋಸ್ಟ್ ಆಫೀಸ್ ನಲ್ಲಿ ಉಳಿತಾಯ ಖಾತೆ ತೆರೆದು ಜಮ ಮಾಡಲಾಗುತ್ತಿದೆ.

ನಿರಾಶ್ರಿತರುಗಳೊಂದಿಗೆ ಆಪ್ತಸಮಾಲೋಚನೆ ನಡೆಸಿ, ಅವರ ಕುಟುಂಬದವರನ್ನು ಸಂಪರ್ಕಿಸಿ, ಮರಳಿ ಮನೆಗೆ ಹಿಂದಿರುಗಿಸಲು ಕ್ರಮವಹಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಫೆಬ್ರುವರಿ -26 ರ ಅಂತ್ಯಕ್ಕೆ ಒಟ್ಟು 1026 ನಿರಾಶ್ರಿತರನ್ನು ಮರಳಿ ಮನೆಗೆ ಹಿಂದಿರುಗಿಸಲಾಗಿದೆ. ವಿವರಗಳನ್ನು ಅನುಬಂಧ -3 ರಲ್ಲಿ ನೀಡಲಾಗಿದೆ.

ಸಾಮಾಜಿಕ ಭದ್ರತೆಗಾಗಿ ಆಧಾರ್ ಕಾರ್ಡ್ ಮಾಡಿಸಿ, ವೃದ್ಧಾಪ್ಯ ವೇತನ, ಅಂಗವಿಕಲ ವೇತನ, ವಿಧವಾ ವೇತನ ನೀಡಲು ಸಂಬಂಧಪಟ್ಟ ಇಲಾಖೆಗಳೊಂದಿಗೆ ಮಂಜೂರಾತಿಗೆ ಕ್ರಮವಹಿಸಲಾಗುತ್ತಿದೆ.

**ಉ)** ಕಳೆದ ಮೂರು ವರ್ಷಗಳಲ್ಲಿ ಕೇಂದ್ರ ಪರಿಹಾರ ಸಮಿತಿಗೆ ವಿವಿಧ ಸ್ಥಳೀಯ ಸಂಸ್ಥೆಗಳಿಂದ ಪಾವತಿಸಲಾಗಿರುವ ಭಿಕ್ಷುಕರ ಉಪಕರದ ಮೊತ್ತ ಎಷ್ಟು; (ವರ್ಷಾವಾರು ಮಾಹಿತಿ ನೀಡುವುದು)

ಕಳೆದ ಮೂರು ವರ್ಷಗಳಲ್ಲಿ ಸ್ಥಳೀಯ ಸಂಸ್ಥೆಗಳಿಂದ (ನಗರ ಪಾಲಿಕೆ/ ಪುರಸಭೆ) ಸಂಗ್ರಹವಾದ 'ಭಿಕ್ಷುಕರ ಉಪಕರ' (Beggar Cess) ಮೊತ್ತ ಈ ಕೆಳಕಂಡಂತೆ ಇದೆ. ವಿವರಗಳನ್ನು ಅನುಬಂಧ 4 ರಲ್ಲಿ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

| ವರ್ಷ | ಬಿಬಿಎಂಪಿ | ನಗರ ಸಭೆ / ಪುರಸಭೆ/ ಪಟ್ಟಣ ಪಂಚಾಯಿತಿ | ಗ್ರಾಮ ಪಂಚಾಯಿತಿ | ಒಟ್ಟು |
|---|---|---|---|---|
| 2022-23 | 6519.00 | 2352.78 | 995.00 | 9866.78 |
| 2023-24 | 13565.00 | 2913.96 | 997.47 | 17476.43 |
| 2024-25 | 5000.00 | 3452.53 | 1524.16 | 9976.69 |
| 2025-2026 (ಫೆಬ್ರುವರಿ 2026 ಅಂತ್ಯಕ್ಕೆ) | 3374.00 | 3589.07 | 3695.87 | 10658.94 |

**ಊ)** ಅಪ್ರಾಪ್ತರನ್ನು ಭಿಕ್ಷಾಟನೆಗೆ ದೂಡುವ ಮಾಫಿಯಾ/ಜಾಲ ಇದೆ ಎನ್ನುವ ಆರೋಪಗಳಿರುವುದು ನಿಜವೇ; ಇದ್ದಲ್ಲಿ ಈ ಮಾಫಿಯಾವನ್ನು ಭೇದಿಸಲು ಸರ್ಕಾರದ ಕ್ರಮಗಳೇನು; ಈ ಸಂಬಂಧ ಪ್ರಕರಣಗಳು ದಾಖಲಾಗಿದೆಯೇ? (ಸಂಪೂರ್ಣ ವಿವರ ನೀಡುವುದು)

ಅಪ್ರಾಪ್ತರನ್ನು ಭಿಕ್ಷಾಟನೆಗೆ ದೂಡುವ ಮಾಫಿಯಾ/ಜಾಲ ಇದೆ ಎನ್ನುವ ಬಗ್ಗೆ ದೂರು ಬಂದಿರುವುದಿಲ್ಲ.

**No: SWD/38/SBR/2026**

**(ಡಾ||ಹೆಚ್.ಸಿ.ಮಹದೇವಪ್ಪ)**
ಸಮಾಜ ಕಲ್ಯಾಣ ಸಚಿವರು.

## ಅನುಬಂಧ-1

**ಕೇಂದ್ರ ಪರಿಹಾರ ಸಮಿತಿಯ ಆಡಳಿತ ವ್ಯಾಪ್ತಿಗೊಳಪಡುವ 15 ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ 2025-26 ನೇ ಸಾಲಿನ ರವರೆಗೆ ಬಂಧಿಸಲಾದ/ಬಿಡುಗಡೆ ಮಾಡಲಾದ ಮತ್ತು ರಕ್ಷಣೆ ನೀಡಲಾದ ನಿರಾಶ್ರಿತರ ವಿವರಣಾ ಪಟ್ಟಿ**

| ಕ್ರ.ಸಂ | ನಿ.ಪ.ಕೇಂದ್ರಗಳು | ದಿ:01-04-2025 ತಾರೀಕಿನಿಂದ ಇದ್ದ ನಿರಾಶ್ರಿತ ಸಂಖ್ಯೆ | | | ದಿ:01-04-2025 ರಿಂದ 28-02-2026ರವರೆಗೆ ಬಂಧಿಸಲಾದ ನಿರಾಶ್ರಿತರ ಸಂಖ್ಯೆ | | | ದಿ: 01-04-2025 ರಿಂದ 28-02-2026 ರವರೆಗೆ ಒಟ್ಟು ನಿರಾಶ್ರಿತರ ಸಂಖ್ಯೆ | | | ದಿ: 01-04-2025 ರಿಂದ 28-02-2026ರವರೆಗೆ ಬಿಡುಗಡೆ ನಿರಾಶ್ರಿತರ ಸಂಖ್ಯೆ | | | ಮರಣ ಹೊಂದಿದ ನಿರಾಶ್ರಿತರ ಸಂಖ್ಯೆ | | | ದಿ:28-02-2026 ರ ಅಂತ್ಯಕ್ಕೆ ಇದ್ದ ನಿರಾಶ್ರಿತರ ಸಂಖ್ಯೆ | | |
|---|---|---|---|---|---|---|---|---|---|---|---|---|---|---|---|---|---|---|---|
| | | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು |
| 1 | ಬೆಂಗಳೂರು | 720 | 180 | **900** | 919 | 379 | **1298** | **1639** | **559** | **2198** | 927 | 370 | **1297** | 27 | 8 | **35** | **685** | **181** | **866** |
| 2 | ಬೆಂಗಳೂರು ಪೂರ್ವ | 19 | 16 | **35** | 46 | 51 | **97** | **65** | **67** | **132** | 38 | 54 | **92** | 0 | 2 | **2** | **27** | **11** | **38** |
| 3 | ವಿಜಾಪುರ | 150 | 33 | **183** | 539 | 123 | **662** | **689** | **156** | **845** | 569 | 116 | **685** | 2 | 0 | **2** | **118** | **40** | **158** |
| 4 | ಬಳ್ಳಾರಿ | 127 | 31 | **158** | 249 | 63 | **312** | **376** | **94** | **470** | 230 | 50 | **280** | 0 | 0 | **0** | **146** | **44** | **190** |
| 5 | ಬೆಳಗಾವಿ | 93 | 30 | **123** | 75 | 19 | **94** | **168** | **49** | **217** | 62 | 18 | **80** | 3 | 2 | **5** | **103** | **29** | **132** |
| 6 | ಚಿತ್ರದುರ್ಗ | 305 | 72 | **377** | 118 | 47 | **165** | **423** | **119** | **542** | 89 | 28 | **117** | 0 | 2 | **2** | **334** | **89** | **423** |
| 7 | ದಾವಣಗೆರೆ | 148 | 0 | **148** | 208 | 0 | **208** | **356** | **0** | **356** | 203 | 0 | **203** | 1 | 0 | **1** | **152** | **0** | **152** |
| 8 | ಗುಲ್ಬರ್ಗಾ | 137 | 0 | **137** | 229 | 0 | **229** | **366** | **0** | **366** | 202 | 0 | **202** | 0 | 0 | **0** | **164** | **0** | **164** |
| 9 | ಹುಬ್ಬಳಿ-ಧಾರವಾಡ | 64 | 46 | **110** | 187 | 66 | **253** | **251** | **112** | **363** | 153 | 66 | **219** | 2 | 2 | **4** | **96** | **44** | **140** |
| 10 | ಕೋಲಾರ | 127 | 35 | **162** | 178 | 69 | **247** | **305** | **104** | **409** | 164 | 67 | **231** | 0 | 1 | **1** | **141** | **36** | **177** |
| 11 | ಮೈಸೂರು | 393 | 49 | **442** | 508 | 101 | **609** | **901** | **150** | **1051** | 542 | 116 | **658** | 2 | 2 | **4** | **357** | **32** | **389** |
| 12 | ದಕ್ಷಿಣ ಕನ್ನಡ | 137 | 2 | **139** | 335 | 11 | **346** | **472** | **13** | **485** | 289 | 12 | **301** | 1 | 0 | **1** | **182** | **1** | **183** |
| 13 | ರಾಯಚೂರು | 132 | 0 | **132** | 167 | 46 | **213** | **299** | **46** | **345** | 135 | 18 | **153** | 3 | 0 | **3** | **161** | **28** | **189** |
| 14 | ಶಿವಮೊಗ್ಗ | 184 | 0 | **184** | 365 | 69 | **434** | **549** | **69** | **618** | 314 | 33 | **347** | 3 | 0 | **3** | **232** | **36** | **268** |
| 15 | ತುಮಕೂರು | 248 | 77 | **325** | 371 | 111 | **482** | **619** | **188** | **807** | 350 | 111 | **461** | 6 | 7 | **13** | **263** | **70** | **333** |
| | ಒಟ್ಟು | **2984** | **571** | **3555** | **4494** | **1155** | **5649** | **7478** | **1726** | **9204** | **4267** | **1059** | **5326** | **50** | **26** | **76** | **3161** | **641** | **3802** |

*ಪು-ಪುರುಷರು

*ಮ-ಮಹಿಳೆಯರು

**2025-26 ನೇ ಸಾಲಿನಲ್ಲಿ 15 ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ ದಿನಾಂಕ 01.04.2025 ರಿಂದ 28-02-2026 ರವರೆಗೆ ವಿವಿಧ ವೃತ್ತಿಗಳಲ್ಲಿ ತರಬೇತಿ ಪಡೆದ ತರಬೇತಿಗಳ ವಿವರ ಅನುಬಂಧ-2**

| ಕ್ರ. ಸಂ | ನಿರಾಶ್ರಿತರ ಪರಿಹಾರ ಕೇಂದ್ರಗಳು | ಕೃಷಿ & ತೋಟಗಾರಿಕೆ ತರಬೇತಿ | | | ಅಡುಗೆ ಸಹಾಯಕರ ತರಬೇತಿ | | | ಅಗರಬತ್ತಿ/ ಪ್ಯಾಕ್/ಫಿನಾಯಿಲ್/ಮೇಣದಬತ್ತಿ ತಯಾರಿಕೆ ತರಬೇತಿ | | | ತೆಂಗಿನನಾರಿನ ಮ್ಯಾಟ್/ ಚಾಕ್ ಪೀಸ್ ತಯಾರಿಕೆತರಬೇತಿ | | | ಬೈಂಡಿಂಗ್/ಫೈಲ್/ ಎನ್‌ವಲಪ್ ಕವರ್/ ಪೇಪರ್ ಬ್ಯಾಗ್ ತಯಾರಿಕೆ ತರಬೇತಿ | | | ಮರಗೆಲಸ /ನೇಯ್ಗೆ/ ಕಮ್ಮಾರಿಕೆ ತರಬೇತಿ | | | ಎರೆಹುಳ ತಯಾರಿಕೆ ತರಬೇತಿ | | | ಹೊಲಿಗೆ ತರಬೇತಿ/ಸ್ವಚ್ಛತೆ/ ಹೇರ್ ಕಟಿಂಗ್ ತರಬೇತಿ ಬಟ್ಟೆ ಇಸ್ತ್ರಿ ತರಬೇತಿ/ಸಿದ್ಧ ಉಡುಪು /ಕೈಮಗ್ಗ/ ವಿದ್ಯುತ್ ಮಗ್ಗ ತರಬೇತಿ | | | ಕೋಳಿ/ಕುರಿ/ಹೈನುಗಾರಿಕೆ ಬಾತು ಕೋಳಿ/ಸಾಕಾಣಿಕೆ ತರಬೇತಿ/ಎರೆಗೊಬ್ಬರ ಕೇಂದ್ರದ ನೈರ್ಮಲ್ಯತೆ | | | ಒಟ್ಟು | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು |
| 1 | ಬೆಂಗಳೂರು | 39 | 0 | 39 | 0 | 0 | 0 | 8 | 0 | 8 | 14 | 0 | 14 | 13 | 0 | 13 | 0 | 0 | 0 | 0 | 0 | 0 | 245 | 93 | 338 | 20 | 0 | 20 | 339 | 93 | 432 |
| 2 | ಬೆಂಗಳೂರು ಪೂರ್ವ | 3 | 0 | 3 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 6 | 3 | 9 | 0 | 0 | 0 | 9 | 3 | 12 |
| 3 | ವಿಜಾಯಪುರ | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 4 | ಬಳ್ಳಾರಿ | 10 | 10 | 20 | 10 | 4 | 14 | 10 | 0 | 10 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 30 | 14 | 44 |
| 5 | ಬೆಳಗಾವಿ | 8 | 2 | 10 | 10 | 6 | 16 | 4 | 0 | 4 | 0 | 0 | 0 | 0 | 0 | 0 | 0 | 0 | 0 | 0 | 0 | 0 | 11 | 0 | 11 | 0 | 0 | 0 | 33 | 8 | 41 |
| 6 | ಚಿತ್ರದುರ್ಗ | 18 | 1 | 19 | 12 | 4 | 16 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 5 | 2 | 7 | 0 | 0 | 0 | 35 | 7 | 42 |
| 7 | ದಾವಣಗೆರೆ | 4 | 0 | 4 | 5 | 0 | 5 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 2 | 0 | 2 | 3 | 0 | 3 | 14 | 0 | 14 |
| 8 | ಗುಲ್ಬರ್ಗಾ | 0 | 0 | 0 | 3 | 0 | 3 | 3 | 0 | 3 | 0 | 0 | 0 | 0 | 0 | 0 | 0 | 0 | 0 | 0 | 0 | 0 | 3 | 0 | 3 | 0 | 0 | 0 | 9 | 0 | 9 |
| 9 | ಹು-ಧಾರವಾಡ | 7 | 0 | 7 | 0 | 0 | 0 | 2 | 0 | 2 | 0 | 0 | 0 | 5 | 1 | 6 | 0 | 0 | 0 | 0 | 0 | 0 | 5 | 4 | 9 | 0 | 0 | 0 | 19 | 5 | 24 |
| 10 | ಕೋಲಾರ | 4 | 0 | 4 | 4 | 0 | 4 | 0 | 0 | 0 | 10 | 0 | 10 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 18 | 0 | 18 |
| 11 | ಮೈಸೂರು | 23 | 0 | 23 | 15 | 5 | 20 | 20 | 3 | 23 | 15 | 0 | 15 | 0 | 0 | 0 | 0 | 0 | 0 | 0 | 0 | 0 | 41 | 2 | 43 | 0 | 0 | 0 | 114 | 10 | 124 |
| 12 | ದ.ಕನ್ನಡ | 3 | 0 | 3 | 5 | 0 | 5 | 0 | 0 | 0 | 0 | 0 | 0 | 3 | 0 | 3 | 0 | 0 | 0 | 0 | 0 | 0 | 0 | 0 | 0 | 3 | 1 | 4 | 14 | 1 | 15 |
| 13 | ರಾಯಚೂರು | 20 | 4 | 24 | 10 | 0 | 10 | 10 | 0 | 10 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 14 | 4 | 18 | 54 | 8 | 62 |
| 14 | ಶಿವಮೊಗ್ಗ | 14 | 0 | 14 | 12 | 0 | 12 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 11 | 0 | 11 | 5 | 0 | 5 | 42 | 0 | 42 |
| 15 | ತುಮಕೂರು | 16 | 0 | 16 | 7 | 0 | 7 | 0 | 0 | 0 | 0 | 0 | 0 | 4 | 0 | 4 | 0 | 0 | 0 | 0 | 0 | 0 | 11 | 19 | 30 | 0 | 0 | 0 | 38 | 19 | 57 |
| | ಒಟ್ಟು | 169 | 17 | 186 | 93 | 19 | 112 | 57 | 3 | 60 | 39 | 0 | 39 | 25 | 1 | 26 | 0 | 0 | 0 | 0 | 0 | 0 | 340 | 123 | 463 | 45 | 5 | 50 | 768 | 168 | 936 |

ಅನುಬಂಧ - 3

(ದಿನಾಂಕ 01.04.2025 ರಿಂದ 28.02.2026) ರವರೆಗೆ ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ, ಮರಳಿ ಮನೆಗೆ ಕಳುಹಿಸಿರುವ ನಿರಾಶ್ರಿತರ ಅಂಕಿ- ಅಂಶ

| ಕ್ರ.ಸಂ | ನಿರಾಶ್ರಿತರ ಪರಿಹಾರ ಕೇಂದ್ರಗಳು | 01-04-2025 ರಿಂದ 28-02-2026 ರವರೆಗೆ ಮರಳಿಮನೆಗೆ ಕಳುಹಿಸಿರುವ ನಿರಾಶ್ರಿತರ ಸಂಖ್ಯೆ | | |
|---|---|---|---|---|
| | | ಪುರುಷ | ಮಹಿಳೆ | ಒಟ್ಟು |
| 1 | ಬೆಂಗಳೂರು | 66 | 27 | **93** |
| 2 | ಬೆಂಗಳೂರು-ಪೂರ್ವ | 1 | 1 | **2** |
| 3 | ವಿಜಾಯಪುರ | 10 | 5 | **15** |
| 4 | ಬಳ್ಳಾರಿ | 0 | 0 | **0** |
| 5 | ಬೆಳಗಾವಿ | 28 | 9 | **37** |
| 6 | ಚಿತ್ರದುರ್ಗ | 68 | 18 | **86** |
| 7 | ದಾವಣಗೆರೆ | 71 | 0 | **71** |
| 8 | ಗುಲ್ಬರ್ಗಾ | 25 | 0 | **25** |
| 9 | ಹು-ಧಾರವಾಡ | 70 | 28 | **98** |
| 10 | ಕೋಲಾರ | 29 | 27 | **56** |
| 11 | ಮೈಸೂರು | 153 | 59 | **212** |
| 12 | ದ.ಕನ್ನಡ | 162 | 12 | **174** |
| 13 | ರಾಯಚೂರು | 0 | 0 | **0** |
| 14 | ಶಿವಮೊಗ್ಗ | 8 | 9 | **17** |
| 15 | ತುಮಕೂರು | 105 | 35 | **140** |
| | ಒಟ್ಟು | **796** | **230** | **1026** |

ಅನುಬಂಧ - 4

# ಪ್ರಶ್ನೆ ಸಂಖ್ಯೆ 2117(2382) ರ ಕ್ರಮ ಸಂಖ್ಯೆ (ಉ) ಗೆ ಮಾಹಿತಿ

| ಕೇಂದ್ರ ಪರಿಹಾರ ಸಮಿತಿಗೆ ಸ್ಥಳೀಯ ಸಂಸ್ಥೆಗಳಿಂದ 2022 ನೇ ಸಾಲಿನಿಂದ 2022-23 ಸಾಲಿನವರೆಗೆ ಸ್ವೀಕೃತವಾದ ಭಿಕ್ಷುಕರ ಉಪಕರದ ಮಾಹಿತಿ | | | | | |
|---|---|---|---|---|---|
| | | | | | ರೂ.ಲಕ್ಷಗಳಲ್ಲಿ |
| ಕ್ರಸಂ | ವರ್ಷ | ಗ್ರೇಟರ್ ಬೆಂಗಳೂರು ಪ್ರಾಧಿಕಾರ | ನಗರ ಸ್ಥಳೀಯ ಸಂಸ್ಥೆಗಳು | ಗ್ರಾಮ ಪಂಚಾಯಿತಿಗಳು | ಒಟ್ಟು |
| 1 | 2022-23 | 6519.00 | 2352.78 | 995.00 | **9866.78** |
| 2 | 2023-24 | 13565.00 | 2913.96 | 997.47 | **17476.43** |
| 3 | 2024-25 | 5000.00 | 3452.53 | 1524.16 | **9976.69** |
| 4 | 2025-26 ಫೆಬ್ರವರಿ ಅಂತ್ಯಕ್ಕೆ | 3374.00 | 3589.07 | 3695.87 | **10658.94** |